ಓಂ ಶಾಂತಿ, ಬಾಪ್‌ದಾದಾ, ರಿವೈಸ್ ಕೋರ್ಸ್/ಅವ್ಯಕ್ತ ಮುರಳಿ 13-03-1998.

# *ಹೋಲಿ ಶಬ್ದದ ಅರ್ಥ ಸ್ವರೂಪದಲ್ಲಿ ಸ್ಥಿತರಾಗುವುದು ಅರ್ಥಾತ್ ತಂದೆಯ ಸಮಾನರಾಗುವುದು.*

(होली शब्द के अर्थ स्वरूप में स्थित होअना अर्थात् बाप समान बनना)

ಇಂದು ಬಾಪ್‌ದಾದಾ ನಾಲ್ಕು ಕಡೆಯ ಪವಿತ್ರವಾದ(ಹೋಲಿಯೆಸ್ಟ್), ಶ್ರೇಷ್ಠವಾದ(ಹೈಯೆಸ್ಟ್) ಮತ್ತು ಶ್ರೀಮಂತ(ರಿಚೆಸ್ಟ್) ಮಕ್ಕಳನ್ನು ನೋಡುತ್ತಿದ್ದಾರೆ. ಸಾಕಾರದಲ್ಲಿ ಸಮ್ಮುಖದಲ್ಲಿ ಕುಳಿತಿದ್ದರೂ, ದೂರದಲ್ಲಿ ಕುಳಿತಿದ್ದರೂ, ಮನಸ್ಸಿನಿಂದ ಸಮೀಪವಿದ್ದರೂ ನಾಲ್ಕೂ ಕಡೆಯ ಮಕ್ಕಳನ್ನು ನೋಡಿ ಬಾಬಾ ಖುಷಿಪಡುತ್ತಿದ್ದಾರೆ. ಪ್ರತಿಯೊಂದು ಮಗು ಎಷ್ಟು ಪವಿತ್ರವಾಗಿ ತಯಾರಾಗುತ್ತಿದ್ದಾರೆ ಎಂದರೆ ಕಲ್ಪವಿಡೀ ಯಾರೂ ಸಹ ಇಷ್ಟು ಮಹಾನ್ ಪವಿತ್ರಾತ್ಮರಾಗಿಲ್ಲ ಮತ್ತು ಆಗುವುದೂ ಇಲ್ಲ. ಸಮಯವನ್ನು ಅನುಸರಿಸಿ, ಧರ್ಮಾತ್ಮರು, ಮಹಾತ್ಮರು ಪವಿತ್ರವಾಗಿ ಇದ್ದಾರೆ. ಆದರೆ ಅವರ ಪವಿತ್ರತೆ ಮತ್ತು ನಿಮ್ಮ ಪವಿತ್ರತೆಯಲ್ಲಿ ಅಂತರವಿದೆ. ಈ ಸಮಯದಲ್ಲಿ ನೀವು ಪವಿತ್ರವಾಗಿ ತಯಾರಾಗುತ್ತಿದ್ದೀರಿ. ಈ ಪವಿತ್ರತೆಯ ಪ್ರಾಪ್ತಿ ಅಥವಾ ಪ್ರಾಲಬ್ಧವೇ ಭವಿಷ್ಯತ್ತಿನಲ್ಲಿ ಅನೇಕ ಜನ್ಮದವರೆಗೆ ತನು, ಮನ, ಧನ, ಸಂಬಂಧ ಸಂಪರ್ಕ ಮತ್ತು ಜೊತೆ ಜೊತೆಯಲಿ ಆತ್ಮವೂ ಪವಿತ್ರವಾಗಿರುತ್ತದೆ. ಶರೀರವೂ ಪವಿತ್ರವಾಗಿರುತ್ತದೆ ಮತ್ತು ಆತ್ಮವೂ ಪವಿತ್ರವಾಗಿರುತ್ತದೆ. ಈ ವಿಧವಾದ ಪವಿತ್ರತೆಯನ್ನು ನೀವೇ ಪಡೆಯುತ್ತಿದ್ದೀರಿ. ಮನಸಾ, ವಾಚಾ, ಕರ್ಮಣಾ ಮೂರು ಪವಿತ್ರವಾಗುವುದರಿಂದ ಈ ವಿಧವಾದ ಪ್ರಾಲಬ್ಧ ಲಭಿಸುತ್ತದೆ. ನೀವು ಇಂತಹ ಪವಿತ್ರಾತ್ಮರಾಗುತ್ತಿದ್ದೀರಿ. ಸ್ವಯಂನ್ನು ಈ ವಿಧವಾದ ಪವಿತ್ರಾತ್ಮರನ್ನಾಗಿ ಭಾವಿಸುತಿದ್ದೀರಾ. ಆ ರೀತಿ ಈಗ ತಯಾರಾಗಿದ್ದೀರಾ? ಅಥವಾ ತಯಾರಾಗುತ್ತಿದ್ದೀರಾ? ತಯಾರಾಗುವುದು ಸಹಜವೇ ಅಥವಾ ಸ್ವಲ್ಪ ಸ್ವಲ್ಪ ಕಷ್ಟವೇ? ಕಲ್ಪಪೂರ್ವ ಕೂಡ ತಯಾರಾಗಿದ್ದಿರಿ ಮತ್ತು ಈಗ ತಯಾರಾಗಲೇಬೇಕು. ಪಕ್ಕಾ ತಯಾರಾಗುತ್ತೀರಾ? ಅಥವಾ ಸ್ವಲ್ಪ ಸ್ವಲ್ಪ ಇದೆಯಾ? ಇಲ್ಲ. ಸ್ವಪ್ನ ಮಾತ್ರ ಅಪವಿತ್ರತೆಯೂ ಸಮಾಪ್ತಿ ಆಗಲೇಬೇಕು. ಇಂದು ತಯಾರಾಗುತ್ತಿದ್ದೇವೆ ಮತ್ತು ನಾಳೆ ತಯಾರಾಗಿಬಿಟ್ಟಿದ್ದೇವೆ. ಎಂದು ಇಷ್ಟು ನಿಶ್ಚಯವಿದೆಯೇ? ನೀವು ಪವಿತ್ರಾತ್ಮರು ಮತ್ತು ಶ್ರೇಷ್ಠಾತ್ಮರು ಸಹ ಆಗಿದ್ದೀರಿ!

ಶ್ರೇಷ್ಠಾತಿ ಶ್ರೇಷ್ಠವಾದ ತಂದೆಯ ಮಕ್ಕಳು ಶ್ರೇಷ್ಠಾತಿ ಶ್ರೇಷ್ಠರು. ಶ್ರೇಷ್ಠವಾಗಿ ತಯಾರಾಗುತ್ತಿದ್ದೀರಿ ಆದ್ದರಿಂದಲೇ ಪೂಜಿಸಲ್ಪಡುತ್ತಿದ್ದೀರಿ. ಇಂದಿನ ಶ್ರೇಷ್ಠ ಆತ್ಮರಾದರೂ, ರಾಜರಾದರೂ, ಈಗಂತೂ ಇಲ್ಲ ಬಿಡಿ. ಈಗ ಇರುವ ಪ್ರೆಸಿಡೆಂಟ್ ಆದರೂ ಮುಖ್ಯಮಂತ್ರಿಯಾದರೂ, ಪೂಜ್ಯರಾಗುವುದಿಲ್ಲ. ಪೂಜ್ಯರಾದ ನಿಮ್ಮ ಮುಂದೆ ಪೂಜಾರಿಯಾಗಿ ನಮಸ್ಕಾರ ಮಾಡುತ್ತಾರೆ ಅಥವಾ ಪೂಜಿಸುತ್ತಾರೆ. ನೀವು ಈಗಲೂ ಸ್ವರಾಜ್ಯಾಧಿಕಾರಿ ಆಗುತ್ತಿದ್ದೀರಿ. ಭವಿಷ್ಯದಲ್ಲಿಯೂ ರಾಜರಿಗೆ ರಾಜರಾಗುತ್ತಿದ್ದೀರಿ. ಇಷ್ಟು ಶ್ರೇಷ್ಠ ಪದವಿಯನ್ನು ಪಡೆಯುತ್ತಿದ್ದೀರಿ. ಅಷ್ಟೇ ಅಲ್ಲದೆ ಇಡೀ ವಿಶ್ವದಲ್ಲಿ ಧನವಂತರೂ ಸಹ, ನಿಮ್ಮ

ಟೈಟಲ್ ಪದಮಾಪದಂಗೆ ಅಧಿಪತಿ. ನಿಮ್ಮ ಖಜಾನೆ ಎಂತಹದು ಎಂದರೆ ಕೋಟೀಶ್ವರರು, ಕೋಟಾನು ಕೋಟಿಶ್ವರರಾದರೂ ಅವರ ಕೋಟಿಯಿಂದ ಇಂತಹ ಖಜಾನೆ ಪ್ರಾಪ್ತಿಸುವುದಿಲ್ಲ. ಶ್ರೇಷ್ಠ ಆತ್ಮರಾದ ನಿಮಗೆ ತಂದೆಯಿಂದ ಎಷ್ಟು ಭಾಗ್ಯ ತಯಾರಾಗುತ್ತಿದೆ ಎಂದರೆ ಹೆಜ್ಜೆಯಲ್ಲಿ ಕೋಟಾನುಕೋಟಿ ಎಂದು ವರ್ಣಿಸುತ್ತಾರೆ ಮತ್ತು ಅನುಭವ ಸಹ ಮಾಡಿಕೊಳ್ಳುತ್ತಿದ್ದೀರಿ ಅಲ್ಲವೇ. ಹೆಜ್ಜೆಯಲ್ಲಿ ಕೋಟಿಯೇ, ನೂರಾ ಅಥವಾ ಸಾವಿರವೇ? ಮಿಲಿಯನೆರ್ಸ್ ಸಹ ಇಷ್ಟು ಸಂಪಾದನೆಯನ್ನು ಮಾಡಿಕೊಳ್ಳಲಾಗುವುದಿಲ್ಲ. ಹೆಜ್ಜೆ ಹಾಕಲು ಎಷ್ಟು ಸಮಯವಿಡಿಸುತ್ತದೆ? ಹೆಜ್ಜೆ ಹಾಕಿರಿ, ಎಷ್ಟು ಸಮಯವಿಡಿಸುತ್ತದೆ? ಒಂದು ಕ್ಷಣ, ಎರಡು ಕ್ಷಣಗಳಿಂದಾದರೂ ಹೇಳಿರಿ. ಆ ಎರಡು ಕ್ಷಣಗಳಲ್ಲಿ ಕೋಟಾನು ಕೋಟಿ ಎಂದರೆ ಇಡೀ ದಿನದಲ್ಲಿ ಎಷ್ಟು ಕೋಟಾನುಕೋಟಿಯಾದ ಹಾಗೆ? ಲೆಕ್ಕ ಮಾಡಿರಿ. ಒಂದು ದಿನದಲ್ಲಿ ಇಷ್ಟು ಸಂಪಾದಿಸಿಕೊಳ್ಳುವ ಕೋಟಿಶ್ವರರು ಯಾರಾದರೂ ಇದ್ದಾರೆಯೇ? ಹೀಗೆ ಯಾರಾದರೂ ಇರುತ್ತಾರೆಯೇ? ಆದ್ದರಿಂದ ಇಡೀ ವಿಶ್ವದಲ್ಲಿ ನೀವು ಧನವಂತರು ಮತ್ತು ನಿಮ್ಮ ಖಜಾನೆ ಎಂತಹದ್ದೆಂದರೆ ಕೆಂಡ ಸುಡಲಾಗುವುದಿಲ್ಲ, ನೀರು ಮುಳುಗಿಸಲಾಗುವುದಿಲ್ಲ, ಕಳ್ಳರು ಕಳ್ಳತನ ಮಾಡಲಾಗುವುದಿಲ್ಲ, ರಾಜರು ಕೂಡ ತಿನ್ನಲಾಗುವುದಿಲ್ಲ(tax). ಇಂತಹ ಖಜಾನೆ ಈ ಪುರುಷೋತ್ತಮ ಸಂಗಮ ಯುಗದಲ್ಲಿಯೇ ಪಡೆಯುತ್ತಿದ್ದೀರಿ. ನಿಮ್ಮ ಈ ಸ್ವಮಾನ ಸ್ಮೃತಿಯಲ್ಲಿ ಇದೆಯೇ? ಇರುತ್ತದೆಯೇ, ಇಲ್ಲವೇ? ಹಿಂದೇ ಇರುವವರು ಕೈಯನ್ನು ಅಲುಗಾಡಿಸುತ್ತಿದ್ದಾರೆ. ಹಿಂದೆ ಇರುವವರು ವಿಶ್ರಾಂತಿಯಾಗಿ ಕುಳಿತುಕೊಂಡಿದ್ದೀರಲ್ಲವೇ? ಪ್ರಪಂಚದಲ್ಲಿಯೇ ಧನವಂತರು ಆದರಿಂದ ವಿಶ್ರಾಂತಿಯೇ ವಿಶ್ರಾಂತಿ. ಆದರೆ ನೀವು ಭಿಕ್ಷುಕರಿಂದ ರಾಜರು(ಬೆಗ್ಗರ್ ಟು ಪ್ರಿನ್ಸ್). ಬಿಕ್ಷುಕರು ಕೂಡ ಮತ್ತು ರಾಜರು ಕೂಡ. ಬಿಕ್ಷಕರು ಎಂದರೆ ಸರ್ವವನ್ನು ತ್ಯಾಗ ಮಾಡಿದವರು, ರಾಜ ಎಂದರೆ ಸರ್ವಪ್ರಾಪ್ತಿಗಳು. ತ್ಯಾಗವಿಲ್ಲದೇ ಇಷ್ಟು ದೊಡ್ಡ ಭಾಗ್ಯ ಲಭಿಸುವುದಿಲ್ಲ. ತ್ಯಾಗಕ್ಕೆ ಭಾಗ್ಯ ಲಭಿಸುತ್ತದೆ. ತನು, ನನ್ನದು ಎನ್ನುವುದಕ್ಕೆ ಬದಲು ನಿನ್ನದು ಎಂದಿದ್ದೀರಿ. ಮನ, ಧನ, ಸಂಬಂಧ ಎಲ್ಲವುಗಳಲ್ಲಿ ಒಂದೇ ಮಾತನ್ನು ಪರಿವರ್ತನೆ ಮಾಡುವುದರಿಂದ ನನ್ನದು ಎಂಬುದಕ್ಕೆ ಬದಲು ನಿನ್ನದು ಎಂದಿದ್ದೀರಿ. ಇರುವುದಂತೂ ಒಂದೇ ವಿಷಯದ ಪರಿವರ್ತನೆ ಆದರೆ ಈ ತ್ಯಾಗದಿಂದಲೇ ಭಾಗ್ಯಕ್ಕೆ ಅಧಿಕಾರಿಯಾಗಿಬಿಟ್ಟಿದ್ದೀರಿ. ಭಾಗ್ಯದ ಮುಂದೆ ಈ ತ್ಯಾಗವೆಷ್ಟು? ಚಿಕ್ಕ ವಿಷಯವೇ ಅಥವಾ ಸ್ವಲ್ಪ ದೊಡ್ಡದಿದೆಯೇ? ಆಗಾಗ ದೊಡ್ಡದಾಗಿ ಬಿಡುತ್ತದೆ. ನಿನ್ನದು ಎನ್ನುವುದು ಎಂದರೆ ದೊಡ್ಡ ವಿಷಯವನ್ನು ಚಿಕ್ಕದನ್ನಾಗಿ ಮಾಡಿಕೊಳ್ಳುವುದು. ನನ್ನದು ಎಂದರೆ ಚಿಕ್ಕ ವಿಷಯವನ್ನು ದೊಡ್ಡದನ್ನಾಗಿ ಮಾಡಿಕೊಳ್ಳುವುದು. ಏನಾದರೂ ಆಗಲಿ 100 ಹಿಮಾಲಯ ಪರ್ವತಗಳಿಗಿಂತ ದೊಡ್ಡ ಸಮಸ್ಯೆ ಬಂದರೂ ನಿನ್ನದು ಎನ್ನುವುದಂತೂ ಪರ್ವತವನ್ನು ಹತ್ತಿಯನ್ನಾಗಿ ಕಲ್ಲನ್ನಾಗಿ ಅಲ್ಲ, ಹತ್ತಿಯನ್ನಾಗಿ ಮಾಡಿಕೊಳ್ಳುವುದು. ಆದರೆ ಕೇವಲ ನಿನ್ನದು ಎಂಬುದೇ ಅಲ್ಲ ಅಂಗೀಕರಿಸಬೇಕು, ಅಂಗೀಕರಿಸುವುದೇ ಅಲ್ಲ, ಅದರ ಮೇಲೆ ನಡೆಯಬೇಕು ಕೂಡ. ಒಂದು ವಿಷಯದ ಪರಿವರ್ತನೆ ಅಷ್ಟೇ. ಸಹಜವೇ ತಾನೇ? ಮತ್ತು ಲಾಭವೇ ನಷ್ಟವೇನು ಇಲ್ಲ ತಾನೆ! ನಿನ್ನದು ಎನ್ನುವುದರಿಂದ ಎಲ್ಲಾ ಭಾರವನ್ನು ತಂದೆಗೆ ಕೊಟ್ಟುಬಿಟ್ಟಿದ್ದೀರಿ. ಬಾಬಾ ನಿನ್ನದು ಆದ್ದರಿಂದ ನೀನೇ ನೋಡಿಕೋ, ನಾವು ನಿಮಿತ್ತ ಮಾತ್ರರು. ಇದರಲ್ಲಿ ಲಾಭವೇ ಇದೆಯಲ್ಲವೇ? ಇದರಿಂದ ನೀವು ಅತೀತ ಮತ್ತು ಪ್ರಿಯವಾಗಿದ್ದೀರಿ. ಯಾರಾದರೇ ಪರಮಾತ್ಮನಿಗೆ ಪ್ರಿಯವಾಗುತ್ತಿರೋ ಅವರು ವಿಶ್ವಕ್ಕೆ ಪ್ರಿಯವಾಗುತ್ತಿರಿ. ಕೇವಲ ಭವಿಷ್ಯ ಪ್ರಾಪ್ತಿಯೇ ಅಲ್ಲ. ವರ್ತಮಾನದ ಪ್ರಾಪ್ತಿಯೂ ಲಭಿಸುತ್ತದೆ. ಒಂದು ಕ್ಷಣದಲ್ಲಿ ಅನುಭವ ಮಾಡಿಕೊಂಡಿದ್ದೀರಿ ಮತ್ತು ಇನ್ನೂ ಮಾಡಿಕೊಂಡು ನೋಡಿರಿ. ಯಾವ ವಿಷಯ ಬಂದರೂ ನಿನ್ನದು

ಎಂದು ಹೇಳಿಬಿಡಿ, ಅಂಗೀಕರಿಸಿರಿ ಮತ್ತು ನಿನ್ನದು ಎಂದೇ ಭಾವಿಸಿ ಮಾಡಿರಿ. ಆಗ ನೋಡಿರಿ ಭಾರವು ಹಗುರವಾಗುತ್ತದೆಯೋ ಅಥವಾ ಇಲ್ಲವೋ, ಅನುಭವ ಇದೆಯಲ್ಲವೇ? ಎಲ್ಲರೂ ಅನುಭವಿಗಳೇ ತಾನೆ? ಆದರೆ ಏನಾಗುತ್ತದೆ? ನನ್ನದು, ನನ್ನದು ಎನ್ನುವುದು ಚೆನ್ನಾಗಿ ಅಭ್ಯಾಸವಾಗಿ ಬಿಟ್ಟಿದೆ. 63 ಜನ್ಮಗಳಿಂದ ಅಭ್ಯಾಸವಾಗಿದೆ. ಆದ್ದರಿಂದ ನಿನ್ನದು, ನಿನ್ನದು ಎನ್ನುತ್ತಲೇ ಮತ್ತೆ ನನ್ನದು ಎಂದುಬಿಡುತ್ತಿದ್ದೀರಿ. ನನ್ನದು ಎಂದರೆ ಹೋಯಿತು ಅಷ್ಟೇ. ಆ ವಿಷಯವಂತೂ ಒಂದು ತಾಸಿನಲ್ಲಿ ಅಥವಾ ಎರಡು ತಾಸಿನಲ್ಲಿ ಅಥವಾ ಒಂದು ದಿನದಲ್ಲಿ ಸಮಾಪ್ತಿಯಾಗಿ ಬಿಡುತ್ತದೆ. ಆದರೆ ನಿನ್ನದು ಎನ್ನುವುದರಿಂದ ನನ್ನದು ಎಂದಿದ್ದೀರಲ್ಲವೇ ಅದರ ಫಲಿತಾಂಶ ಮಾತ್ರ ಬಹಳ ಕಾಲ ಇರುತ್ತದೆ. ವಿಷಯ ಅರ್ಧ ತಾಸೇ ಇರುತ್ತದೆ ಆದರೆ ಪಶ್ಚಾತಾಪ ರೂಪದಲ್ಲಿ ಅಥವಾ ಪರಿವರ್ತನೆ ಯಾಗಬೇಕು ಎಂಬ ಲಕ್ಷ್ಯದಿಂದ ಆ ವಿಷಯ ಮಾತು ಮಾತಿಗೆ ಸ್ಮೃತಿ ಬರುತ್ತಲೇ ಇರುತ್ತದೆ. ಆದ್ದರಿಂದಲೇ ತಂದೆ ಮಕ್ಕಳೆಲ್ಲರಿಗೂ ಹೇಳುತ್ತಾರೆ. ಒಂದು ವೇಳೆ ನನ್ನದು ಎಂಬ ಮಾತಿನ ಮೇಲೆ ನಿಮಗೆ ಪ್ರೀತಿ ಇದ್ದರೆ, ಅಭ್ಯಾಸ, ಸಂಸ್ಕಾರವಾದ್ದರಿಂದ ಅನ್ನಲೇ ಬೇಕಾಗುತ್ತದೆ ಎಂದು ತಿಳಿದಿದ್ದರೆ, ನನ್ನ ಬಾಬಾ ಎನ್ನಿರಿ. ಅಭ್ಯಾಸವಿರುವ ಕಾರಣ ಬಲಹೀನವಾಗುತ್ತಿದ್ದೀರಲ್ಲವೇ? ಆದ್ದರಿಂದ ಯಾವಾಗ ನನ್ನದು ನನ್ನದು ಎಂದು ಬರುತ್ತದೆಯೋ ಆಗ ನನ್ನ ಬಾಬಾ, ನನ್ನ ಬಾಬಾ, ಎಂದುಕೊಂಡು ಸಮಾಪ್ತಿ ಮಾಡಿಬಿಡಿ. ನನ್ನದು ಎಂಬ ಅನೇಕ ವಿಷಯಗಳನ್ನು ನನ್ನ ಬಾಬಾ ಎನ್ನುವುದರಲ್ಲಿ ಸಮಾವೇಶಗೊಳಿಸಿಬಿಡಿ.

ರಷ್ಯಾದವರು ಒಂದು ಗೊಂಬೆಯನ್ನು ತರುತ್ತೀರಲ್ಲವೇ. ಗೊಂಬೆಯಲ್ಲಿ ಗೊಂಬೆ ಇದ್ದು ಎಲ್ಲಾ ಸೇರಿ ಒಂದು ಗೊಂಬೆ ಆಗಿರುತ್ತದೆ. ಅದೇ ರೀತಿಯಾಗಿ ನೀವೂ ಸಹ ನನ್ನ ಬಾಬಾ ಎಂಬ ಒಂದರಲ್ಲಿ ಅನೇಕ ವಿಧವಾದ ನನ್ನದು ಎಂಬುದನ್ನು ಕಲಿಸಿಬಿಡಿ. ಸಮಾಪ್ತಿ ಆಗಿಬಿಡುತ್ತವೆ. ಹೀಗೆ ಮಾಡಬಲ್ಲಿರಾ? ಮಾಡುತ್ತಿದ್ದೀರಿ ಆದರೆ ಒಮ್ಮೊಮ್ಮೆ ನನ್ನದು ಎಂಬುದರ ವಿಸ್ತಾರದಲ್ಲಿ ಹೋಗಿಬಿಡುತ್ತಿದ್ದೀರಿ. ಈಗ ಒಮ್ಮೊಮ್ಮೆ ಹೇಳುತ್ತಿದ್ದೀರಿ ಆದರೆ ಸದಾ ನನ್ನದು ಎಂಬುದು ನಿನ್ನದಾಗಿ ಬಿಡಬೇಕು. ಇದರಲ್ಲಿ ನಂಬರ್‌ವಾರ್‌ಆಗಿ ಇದ್ದೀರಿ ನಂಬರ್‌ವನ್ ಆದವರೂ ಸಹ ಇದ್ದೀರಿ ಮತ್ತು ಹಿಂದಿನ ನಂಬರಿನವರು ಸಹ ಇದ್ದೀರಿ. ಹೋಲಿ ಆಚರಿಸಿಕೊಳ್ಳಲು ಬಂದಿದ್ದೀರಲ್ಲವೇ? ಸದಾ ಇದೇ ಮಂತ್ರವನ್ನು ನೆನಪಿಟ್ಟುಕೊಳ್ಳಿರಿ. ನಾನು ತಂದೆಯವನಾಗಿಬಿಟ್ಟಿದ್ದೇನೆ. ಪರಮಾತ್ಮ ಪರಿವಾರವಾಗಿ ಬಿಟ್ಟಿದ್ದೇನೆ( ಬಾಪ್ ಕೀ ಹೋಲಿ). ಇಂತಹ ಹೋಲಿ ಆಚರಿಸಿಕೊಂಡಿದ್ದೀರಾ. ಈಗ ಏನು ಮಾಡಬೇಕು ಈಗ ಸುಡಬೇಕು. ಅಥವಾ ಸುಟ್ಟು ಬಿಟ್ಟಿದ್ದೀರಾ? ಸುಟ್ಟುಬಿಟ್ಟಿದ್ದೇವೆ ಎಂದು ಹೇಳುತ್ತಿಲ್ಲ. ಯೋಚಿಸುತ್ತಿದ್ದೀರಾ?

ಭಕ್ತಿ ಮಾರ್ಗದಲ್ಲಿ ಆಚರಿಸಿಕೊಳ್ಳುವ ಉತ್ಸವಗಳೆಲ್ಲವೂ ಸ್ಮೃತಿ ಚಿಹ್ನೆಗಳು. ಆದರೆ ಅವುಗಳನ್ನೂ ಸಹ ಸ್ವಲ್ಪ ಸ್ವಲ್ಪ ಅರ್ಥಗಳಿಂದಲೇ ಇಟ್ಟಿದ್ದಾರೆ. ಹೋಲಿಗೆ ಮೊದಲು ಸುಡಬೇಕು ನಂತರ ಆಚರಿಸಿಕೊಳ್ಳಬೇಕು, ಮೊದಲು ಆಚರಿಸಿಕೊಂಡು ನಂತರ ಸುಡುವುದಲ್ಲ ಅರ್ಥಾತ್ ಮೊದಲು ಆಶುದ್ಧವನ್ನು, ಬಲಹೀನತೆಗಳನ್ನು, ಕೆಟ್ಟದ್ದನ್ನು ಸುಟ್ಟುಬಿಡಿ. ನಂತರ ಆಚರಿಸಿಕೊಳ್ಳಿರಿ ಎಂದು ಅರ್ಥ. ನೀವಂತೂ ಬಹಳ ಮೊದಲೇ ಸುಟ್ಟುಬಿಟ್ಟೀದ್ದೀರಿ ಅಲ್ಲವೇ? ಸ್ವಲ್ಪ ಸ್ವಲ್ಪ ಏನಾದರೂ ಉಳಿದಿದೆಯೇ? ಪಾಂಡವರು ಧರಿಸುವ ವಸ್ತ್ರ ಶರ್ಟ್ ನ ತುಂಡೇನಾದರೂ ಉಳಿದಿದೆಯೇ? ಸೀರೆಯ ಬಟ್ಟೆ ಏನಾದರೂ ಉಳಿದುಬಿಟ್ಟಿಲ್ಲ ತಾನೇ? ವಾಸ್ತವದಲ್ಲಿಯೂ ಮೊದಲು ಪೂರ್ತಿಯಾಗಿ ಸುಟ್ಟ ನಂತರವೇ ಆತ್ಮಿಕವಾಗಿ

ಆಚರಿಸಿಕೊಳ್ಳುವುದರಿಂದ ಶಕ್ತಿ ಅಥವಾ ಅತೀಂದ್ರೀಯ ಸುಖದ ಅನುಭೂತಿ ಆಗುತ್ತದೆ. ಮನೋರಂಜನೆಯ ರೂಪದಲ್ಲಿ ಆಚರಿಸಿಕೊಳ್ಳುವುದು ಎಂಬುದು ಬೇರೆ ವಿಷಯ. ಸಂಗಮಯುಗ ಎಂದರೆ ಮೋಜಿನಯುಗ ಆದ್ದರಿಂದ ಮನೋರಂಜನೆ ರೂಪದಿಂದಲೂ ಆಚರಿಸಿಕೊಳ್ಳುತ್ತಾರೆ ಮತ್ತು ಆಚರಿಸಿಕೊಳ್ಳಿರಿ ಚೆನ್ನಾಗಿ ಆಚರಿಸಿಕೊಳ್ಳಿರಿ ಆದರೆ ಪರಮಾತ್ಮನ ರಂಗಿನಲ್ಲಿ ರಂಗರಿಸಿಕೊಳ್ಳುವುದು ಅರ್ಥಾತ್ ತಂದೆಯ ಸಮಾನರಾಗುವುದು. ರಂಗನಲ್ಲಿ ರಂಗರಿಸಿಕೊಳ್ಳುವುದು ಇದೇ ಆಗಿದೆ. ಯಾವ ರೀತಿ ಆದರೆ ತಂದೆ ಅಶರೀರಿ ಮತ್ತು ಅವ್ಯಕ್ತನೋ ಅದೇ ರೀತಿಯಾಗಿ ಅಶರೀರಿ ಸ್ಥಿತಿಯನ್ನು ಅನುಭವ ಮಾಡಿಕೊಳ್ಳುವುದು ಅಥವಾ ಅವ್ಯಕ್ತ ಫರಿಶ್ತಾ ಸ್ಥಿತಿಯನ್ನು ಅನುಭವ ಮಾಡಿಕೊಳ್ಳುವುದೇ ರಂಗಿನಲ್ಲಿ ರಂಗರಿಸಿಕೊಳ್ಳುವುದು. ಕರ್ಮ ಮಾಡಿರಿ ಆದರೆ ಅವ್ಯಕ್ತ ಫರಿಶ್ತಾ ಆಗಿ ಮಾಡಿರಿ. ಯಾವಾಗ ಬೇಕಾದರೆ ಆಗ ಅಶರೀರಿ ಸ್ಥಿತಿಯನ್ನು ಅನುಭವ ಮಾಡಿಕೊಳ್ಳಿರಿ. ಹೀಗೆ ಮನಸ್ಸು, ಬುದ್ಧಿ ನಿಮ್ಮ ನಿಯಂತ್ರಣದಲ್ಲಿರಬೇಕು. ಆಜ್ಞಾಪಿಸಿರಿ ಮತ್ತು ಅಶರೀರಿಯಾಗಿ ಬಿಡಿ. ಆಜ್ಞಾಪಿಸಿದಾಕ್ಷಣ ಆಗಿಬಿಡಬೇಕು. ಫರಿಶ್ತಾ ಆಗಿಬಿಡಬೇಕು. ಮನಸ್ಸನ್ನು ಯಾವ ರೀತಿ, ಯಾವ ಸ್ಥಿತಿಯಲ್ಲಿ ಸ್ಥಿತ ಮಾಡಬೇಕೆಂದುಕೊಂಡರೆ ಅಲ್ಲಿ ಮತ್ತು ಆ ವಿಧವಾಗಿ ಕ್ಷಣದಲ್ಲಿ ಸ್ಥಿತಮಾಡಿಬಿಡಿ. ಹೆಚ್ಚು ಸಮಯ, ಐದು ಕ್ಷಣಗಳು ಹಿಡಿಸಿತು, ಎರಡು ಕ್ಷಣಗಳು ಹಿಡಿಸಿತು ಎನ್ನಬಾರದು. ಹೀಗಾದರೂ ನಿಯಂತ್ರಣ, ಆಜ್ಞೆಯಲ್ಲಿ ಇಲ್ಲದ ಹಾಗೆಯೇ. ಎಂತಹ ಪರಿಸ್ಥಿತಿಯಲ್ಲಿದ್ದರೂ, ಗೊಂದಲವಿದ್ದರೂ, ಗೊಂದಲದಲ್ಲಿಯೂ ಅಚಲವಾಗಿಯೇ ಇರಿ. ನಿಯಂತ್ರಣಾ ಶಕ್ತಿ ಇದೆಯೇ? ಅಥವಾ ಅಶರೀರಿಯಾಗಬೇಕು, ಅಶರೀರಿಯಾಗಬೇಕು ಹೀಗೆ ಯೋಚಿಸುವುದರಲ್ಲಿಯೇ ಸಮಯವಾಗಿ ಬಿಡುತ್ತದೆಯೇ? ಕೆಲ ಮಕ್ಕಳು ವಿಧವಿಧವಾದ ಪೋಜುಗಳನ್ನು ಬದಲಾಯಿಸುತ್ತಾ ಇರುತ್ತಾರೆ. ತಂದೆ ನೋಡುತ್ತಲೂ ಇರುತ್ತಾರೆ. ಅಶರೀರಿ ಆಗಬೇಕು ಎಂದುಕೊಳ್ಳುತ್ತಾರೆ. ಅಶರೀರಿ ಅರ್ಥಾತ್ ಆತ್ಮ ರೂಪದಲ್ಲಿ ಸ್ಥಿತರಾಗಬೇಕಲ್ಲವೇ ಅರ್ಥಾತ್ ನಾನು ಆತ್ಮ, ಶರೀರವಂತೂ ಅಲ್ಲವೇ ಅಲ್ಲ, ಆತ್ಮನಾಗಿದ್ದೇನೆ, ನಾನು ಬಂದಿರುವುದೇ ಆತ್ಮನಾಗಿ, ಆತ್ಮನಾಗಿಯೇ ತಯಾರಾಗಬೇಕು. ಇಂತಹ ಯೋಚನೆಯಲ್ಲಿ ಇರುತ್ತಾರೆ ಎಂದರೆ ಅದು ಅಶರೀರಿ ಆದಹಾಗೆಯೇ ಅಥವಾ ಅಶರೀರಿಯಾಗಲು ಯುದ್ಧ ಮಾಡಿದ ಹಾಗೆಯೇ? ಕ್ಷಣದಲ್ಲಿ ಅಶರೀರಿಯಾಗಬೇಕೆಂದು ನೀವು ಮನಸ್ಸನ್ನು ಆಜ್ಞಾಪಿಸಿದ್ದೀರಿ ಆದರೆ ಅಶರೀರಿ ಎಂದರೆ ಅರ್ಥವೇನು? ಯಾವಾಗ ಅಶರೀರಿಯಾಗುತ್ತಿರಿ? ಯಾವ ರೀತಿ ಆಗುತ್ತೀರಿ, ಎಂದು ಯೋಚಿಸಲೆಂದು ಆಜ್ಞಾಪಿಸಲಿಲ್ಲ ತಾನೇ? ಹೀಗೆ ಯೋಚಿಸುವುದು ಎಂದರೆ ಆಜ್ಞೆಯನ್ನು ಅಂಗೀಕರಿಸದ ಹಾಗೆಯೇ ತಾನೇ, ಇದು ನಿಯಂತ್ರಣಾ ಶಕ್ತಿ ಆಗಲಿಲ್ಲ ತಾನೇ? ಈಗ ಸಮಯವನ್ನು ಅನುಸರಿಸಿ ಈ ಅಭ್ಯಾಸವೇ ಅವಶ್ಯಕವಾಗಿದೆ. ಒಂದು ವೇಳೆ ಕಂಟ್ರೋಲಿಂಗ್ ಪವರ್ ಇಲ್ಲದಿದ್ದರೆ ಯಾವ ಪರಿಸ್ಥಿತಿಗಳಾದರೂ ಗೊಂದಲದಲ್ಲಿ ತರಬಹುದು. ಆದ್ದರಿಂದ ಹೋಲಿ ಎಂಬ ಒಂದೇ ಶಬ್ದವನ್ನು ನೆನಪಿಟ್ಟುಕೊಂಡರೂ ಸಾಕು ಹೋಲಿ ಅರ್ಥಾತ್ ಆದದ್ದೇನೋ ಆಗಿ ಹೋಯಿತು ಮತ್ತು ಹೋಲಿ ಎಂದರೆ ತಂದೆಯವರಾಗಿ ಬಿಟ್ಟಿದ್ದೇವೆ. ಇನ್ನೂ ಹೇಗೆ ತಯಾರಾಗಿದ್ದೀರಿ? ಹೋಲಿ ಎಂದರೆ ಪವಿತ್ರ ಆತ್ಮರಾಗಿದ್ದೀರಿ. ಹೋಲಿ ಎಂಬ ಒಂದು ಮಾತನ್ನು ಸ್ಮೃತಿಯಲ್ಲಿಟ್ಟುಕೊಳ್ಳಿರಿ. ಆ ಮಾತನ್ನು ಮೂರು ಅರ್ಥಗಳಿಂದ ಉಪಯೋಗಿಸಿರಿ. ಹೌದು ಹೋಲಿ ಎಂದರೆ ಕಳೆದು ಹೋದದ್ದೇನು ಕಳೆದು ಹೋಯಿತು ಆದ್ದರಿಂದ ಆದದ್ದೇನು ಆಗಿ ಹೋಯಿತು. ಹೀಗೆ ವರ್ಣಿಸುವುದು, ಯೋಚಿಸುತ್ತಾ ಇರುವುದು ಅಲ್ಲ. ಅರ್ಥ ಸ್ವರೂಪದಲ್ಲಿ ಸ್ಥಿತರಾಗಿರಿ. ಯೋಚಿಸಿದಿರಿ ಮತ್ತು ಆಗಿಬಿಟ್ಟಿರಿ ಅಷ್ಟೇ ಹೊರತು ಯೋಚಿಸುತ್ತಾ ಯೋಚಿಸುವುದರಲ್ಲಿಯೇ ಇರುವುದಲ್ಲ. ಯೋಚಿಸಿದ ಹಾಗೆಯೇ ಆಗಿಬಿಟ್ಟಿರಿ, ತಯಾರಾಗಿಬಿಟ್ಟಿರಿ, ಸ್ಥಿತರಾಗಿಬಿಟ್ಟಿರಿ.

(ಬಾಪ್‌ದಾದಾ ವ್ಯಾಯಾಮವನ್ನು ಮಾಡಿಸಿದರು) ಈಗ ಸಮಯವನ್ನು ಅನುಸರಿಸಿ ಸದಾ ಸ್ಮೃತಿ ಮತ್ತು ಸೇವೆಯಲ್ಲಿರುವವರು ನಿಮಿತ್ತ ಆತ್ಮರಾದ ನೀವೆಲ್ಲರೂ ಸ್ವ ಪರಿವರ್ತನೆಯಿಂದ ವಿಶ್ವ ಪರಿವರ್ತನೆಯ ತರಂಗಗಳನ್ನು ಶಕ್ತಿವಂತವಾಗಿ ಮತ್ತು ತೀವ್ರ ವೇಗದಿಂದ ಹೆಚ್ಚಿಸಬೇಕು. ನಾಲ್ಕು ಕಡೆ ಮಾನಸಿಕ ದುಃಖ, ಅಶಾಂತಿ, ಮಾನಸಿಕ ಗೊಂದಲಗಳು ತೀವ್ರ ವೇಗದಿಂದ ಬೆಳೆದುಬಿಡುತ್ತಿವೆ. ಬಾಪ್‌ದಾದಾರವರಿಗೆ ವಿಶ್ವದಲ್ಲಿರುವ ಆತ್ಮರ ಮೇಲೆ ದಯೆ ಬರುತ್ತದೆ. ದುಃಖದ ಅಲೆ ಎಷ್ಟು ತೀವ್ರ ವೇಗದಿಂದ ಬೆಳೆಯುತ್ತದೆಯೋ ಅಷ್ಟೇ ಸುಖದಾತನ ಮಕ್ಕಳಾದ ನೀವು ನಿಮ್ಮ ಮನಸಾ ಶಕ್ತಿಯಿಂದ ಮನಸಾ ಸೇವೆ ಅಥವಾ ಶಕ್ತಿಯನ್ನು ಕೊಡುವ ಸೇವೆಯಿಂದ, ವೃತ್ತಿಯಿಂದ ನಾಲ್ಕು ಕಡೆಯ ಸುಖದ ಸಹಾಯವನ್ನು ಅನುಭವ ಮಾಡಿಸಿರಿ. ತಂದೆಯನ್ನಂತೂ ಕರೆಯುತ್ತಲೇ ಇರುತ್ತೀರಿ ಆದರೆ ಪೂಜ್ಯದೇವಾತ್ಮರನ್ನು ಕೂಡ ಯಾವುದೋ ಒಂದು ರೂಪದಲ್ಲಿ ಕರೆಯುತ್ತಲೇ ಇದ್ದಾರೆ. ಆದ್ದರಿಂದ ಓ ದೇವಾತ್ಮರೇ, ಪೂಜ್ಯಾತ್ಮರೇ, ನಿಮ್ಮ ಭಕ್ತಾತ್ಮರಿಗೆ ಶಕ್ತಿಯನ್ನು ಕೊಡಿ, ದುಃಖ ಸಮಾಪ್ತಿಯಾಗುವ ಆವಿಷ್ಕರಣೆಯನ್ನು ಆವಿಷ್ಕರಿಸಬೇಕು ಎಂದು ವೈಜ್ಞಾನಿಕರು ಸಹ ಯೋಚಿಸುತ್ತಿದ್ದಾರೆ. ವಿಜ್ಞಾನ ಸಾಧನಗಳು ಸುಖದೊಂದಿಗೆ ದುಃಖವನ್ನು ಸಹ ಕೊಡುತ್ತಿವೆ ಆದರೆ ದುಃಖ ಇರಬಾರದು ಕೇವಲ ಸುಖವೇ ಪ್ರಾಪ್ತಿಸಬೇಕು ಎಂದು ಯೋಚಿಸುತ್ತಿದ್ದಾರೆ. ಆದರೆ ಸ್ವಯಂನಲ್ಲಿಯೇ ಅರ್ಥಾತ್ ಆತ್ಮರಲ್ಲಿ ಅವಿನಾಶಿ ಸುಖದ ಅನುಭೂತಿ ಇಲ್ಲದಿದ್ದರೆ ಇತರರಿಗೆ ಹೇಗೆ ಕೊಡಬಲ್ಲಿರಿ? ನಿಮ್ಮೆಲ್ಲರ ಹತ್ತಿರ ಸುಖ, ಶಾಂತಿ, ನಿಸ್ವಾರ್ಥ ಪ್ರೀತಿಯ ಸ್ಟಾಕ್ ಜಮಾ ಆಗಿ ಇದೆಯೇ? ಜಮಾ ಆಗಿದೆಯಾ ಅಥವಾ ಎಷ್ಟು ಸಂಪಾದಿಸಿಕೊಳ್ಳುತ್ತಿದ್ದೀರೋ ಅಷ್ಟೂ ಖರ್ಚು ಮಾಡಿಬಿಡುತ್ತಿದ್ದೀರಾ? ಆದ್ದರಿಂದ ಇದನ್ನು ಸಹ ಪರಿಶೀಲನೆ ಮಾಡಿಕೊಳ್ಳಿ ಜಮಾ ಅಂತೂ ಆಗುತ್ತಿದೆ ಆದರೆ ಜಮಾದೊಂದಿಗೆ ಖರ್ಚು ಸಹ ಆಗುತ್ತಿಲ್ಲ ತಾನೇ? ಜ್ಞಾನ ಖಜಾನೆ ಅಂತೂ ಖರ್ಚು ಮಾಡುವುದರಿಂದಲೇ ಬೆಳೆಯುತ್ತದೆ, ಖಾಲಿಯಾಗುವುದಿಲ್ಲ. ಮಾತು ಮಾತಿಗೆ ನಿಮ್ಮ ಸ್ವಭಾವ -ಸಂಸ್ಕಾರಗಳಿಗೆ ಅಥವಾ ಮಾಯೆಯಿಂದ ಬರುವ ಸಮಸ್ಯೆಗಳಲ್ಲಿ ನಿಮ್ಮ ಶಕ್ತಿಗಳನ್ನು ಉಪಯೋಗಿಸಿದರೆ, ಜಮಾದ ಖಾತೆ ಕಡಿಮೆಯಾಗಿ ಬಿಡುತ್ತದೆ. ಆದ್ದರಿಂದ ಪರಿಶೀಲಿಸಿಕೊಳ್ಳಿರಿ ಜಮಾ ಮಾಡಿಕೊಳ್ಳುತ್ತಿದ್ದೀರಿ ಆದರೆ ಖರ್ಚು ಮಾಡಿಬಿಟ್ಟಿದ್ದೇನೆಯೇ, ಇನ್ನು ಎಷ್ಟು ಉಳಿದಿದೆ ಎಂದು. ಸಂಪಾದಿಸಿಕೊಳ್ಳುತ್ತಿದ್ದೀರಿ ಮತ್ತು ತಿಂದು ಬಿಟ್ಟಿದ್ದೀರಿ. ಎರಡು ದಿನಗಳು ಸಂಪಾದಿಸಿದ್ದೀರಿ ಜಮಾ ಮಾಡಿದ್ದೀರಿ ಆದರೆ ಒಂದು ದಿನದಲ್ಲಿ ಜಮಾ ಮಾಡಿದ್ದೆಲ್ಲವೂ ಖರ್ಚು ಮಾಡಬೇಕಾಗಿ ಬರುತ್ತಿಲ್ಲ ತಾನೇ? ಹೀಗೆ ಸಂಪಾದಿಸಿ ಕೊಂಡು ತಿಂದು ಬಿಟ್ಟರೆ ಅಥವಾ ಸ್ವಯಂನ ಪ್ರತಿ ಉಪಯೋಗಿಸಿ ಸಮಾಪ್ತಿ ಮಾಡಿಕೊಂಡರೆ, 21 ಜನ್ಮಗಳಿಗೆ ಇನ್ನೇನು ಜಮಾ ಮಾಡಿಕೊಂಡ ಹಾಗೆ. ಜಮಾ ಮಾಡಿಕೊಳ್ಳುತ್ತಿದ್ದೇವೆ ಎಂಬ ಆನಂದವಂತೂ ಇರುತ್ತದೆ. ಆದರೆ ಖರ್ಚಿನ ಖಾತೆಯನ್ನು ನೋಡಿಕೊಳ್ಳದಿದ್ದರೆ ಸಮಯಕ್ಕೆ ಮೋಸ ಹೋಗುತ್ತೀರಿ. ಜಮಾದ ಖಾತೆಯನ್ನು ನೋಡಿಕೊಳ್ಳಿರಿ. ಅದರೊಂದಿಗೆ ಖರ್ಚಿನ ಖಾತೆಯನ್ನು ಸಹ ನೋಡಿಕೊಳ್ಳಿರಿ. ಇತರರಿಗೆ ಯಾವುದಾದರೊಂದು ಶಕ್ತಿಯನ್ನು, ಗುಣವನ್ನು, ಜ್ಞಾನದ ಖಜಾನೆಯನ್ನು ಕೊಟ್ಟರೆ ಅದು ಖರ್ಚಲ್ಲ. ಜಮಾದಖಾತೆಯಲ್ಲಿಯೇ ಜಮಾ ಆಗುತ್ತದೆ. ಆದರೆ ನಿಮಗಾಗಿ ಖರ್ಚು ಮಾಡಿದರೆ ಖಾತೆ ಖಾಲಿಯಾಗಿ ಬಿಡುತ್ತದೆ. ಆದ್ದರಿಂದ ಒಳ್ಳೆಯ ವಿಶಾಲ ಬುದ್ಧಿಯಿಂದ ಪರಿಶೀಲಿಸಿಕೊಳ್ಳಿರಿ. ಜಮಾದ ಖಾತೆ ಹೆಚ್ಚಾಗಿ ಇರಬೇಕು. ಇದು ಸಹಜವೇ ಪ್ರತಿ ಹೆಜ್ಜೆಯಲ್ಲಿ ಪದಮದಷ್ಟು ಜಮಾ ಮಾಡಿಕೊಳ್ಳುತ್ತಾ ಹೋಗಿರಿ. ಆಗ ಜಮಾದ ಖಾತೆ ಬಹಳಷ್ಟು ಬೆಳೆಯುತ್ತದೆ. ಪ್ರತಿ ಹೆಜ್ಜೆ ಅಥವಾ ಕರ್ಮ ಬ್ರಹ್ಮಾ ತಂದೆಯ ಸಮಾನವಾಗಿ ಇದೆಯೇ ಎಂದು ಪರಿಶೀಲಿಸಿಕೊಳ್ಳಿರಿ. ಅನುಭವಿಗಳಲ್ಲವೇ

ಯಾವುದಾದರೂ ಒಳ್ಳೆಯ ಕರ್ಮವನ್ನು ಮಾಡಿದರೆ ಆ ಕರ್ಮಫಲವಾಗಿ ಆ ಸಮಯದಲ್ಲಿಯೇ ಪ್ರತ್ಯಕ್ಷ ರೂಪದಲ್ಲಿ ಖುಷಿ, ಶಕ್ತಿ ಮತ್ತು ಸಫಲತೆಯ ಕಾರಣದಿಂದ ಡಬಲ್ ಲೈಟ್ ಆಗಿ ಇರುತ್ತೀರಿ ಏಕೆಂದರೆ ತಂದೆಯನ್ನು ಜೊತೆಯಲ್ಲಿ ಇಟ್ಟುಕೊಂಡು ಕರ್ಮ ಮಾಡಿದ್ದೀರಿ ಎಂಬ ಸ್ಮೃತಿ ಇರುತ್ತದೆ. ಹಾಗೆಯೆ ಒಂದು ವೇಳೆ ವಿಕರ್ಮ ಮಾಡಿದರೆ ಅದರ ಪಶ್ಚತ್ತಾಪ ಬಹಳ ಹೆಚ್ಚಾಗಿ ಇರುತ್ತದೆ. ವಾಸ್ತವಕ್ಕೆ ಈಗ ವಿಕರ್ಮಗಳು ಆಗಬಾರದು. ಆ ಸಮಯ ಕಳೆದು ಹೋಯಿತು ಆದರೆ ಈಗ ಯಾವ ವ್ಯರ್ಥ ಸಂಕಲ್ಪ ಅಥವಾ ವ್ಯರ್ಥಕರ್ಮ, ವ್ಯರ್ಥ ಮಾತು, ವ್ಯರ್ಥ ಸಂಬಂಧ, ಸಂಪರ್ಕಗಳು ಸಹ ಇರಬಾರದು. ಏಕೆಂದರೆ ವ್ಯರ್ಥ ಸಂಬಂಧ ಸಂಪರ್ಕಗಳು ಸಹ ಮೋಸ ಮಾಡುತ್ತವೆ. ಎಂತಹ ಸಾಂಗತ್ಯವೋ ಅಂತಹ ಬಣ್ಣವು ಅಂಟಿಕೊಳ್ಳುತ್ತದೆ. ಕೆಲ ಮಕ್ಕಳು ಬಹಳ ಚತುರವಾಗಿ ಹೇಳುತ್ತಿದ್ದಾರೆ. ನಾವು ಅವರೊಂದಿಗೆ ಸಾಂಗತ್ಯವನ್ನು ಮಾಡುತ್ತಿಲ್ಲ, ಆದರೆ ಅವರು ನನ್ನನ್ನು ಬಿಡುತ್ತಿಲ್ಲ ಎಂದು. ನಾನು ಮಾಡುತ್ತಿಲ್ಲ ಆದರೆ ಅವರು ಬಿಡುತ್ತಿಲ್ಲ ಎನ್ನುತ್ತಿದ್ದಾರೆ. ಅವರನ್ನು ಬಿಡಿಸಿಕೊಳ್ಳುವುದು ಬರುತ್ತಿಲ್ಲವೇ? ಒಂದು ವೇಳೆ ಯಾರಾದರೂ ಕೆಟ್ಟ ವಸ್ತುವನ್ನು ಕೊಡುತ್ತಿದ್ದರೆ ನೀವು ಹೇಗೆ ತೆಗೆದುಕೊಳ್ಳುತ್ತಿದ್ದೀರಿ? ತೆಗೆದುಕೊಳ್ಳುವವರು ತೆಗೆದುಕೊಳ್ಳದಿದ್ದರೆ ಕೊಡುವವರು ಹೇಗೆ ಕೊಡುತ್ತಾರೆ. ಆದ್ದರಿಂದ ವ್ಯರ್ಥ ಸಂಬಂಧ, ಸಂಪರ್ಕಗಳು ಕೂಡ ಖಾತೆಯನ್ನು ಖಾಲಿ ಮಾಡಿಬಿಡುತ್ತವೆ. ಆ ಸಮಯದಲ್ಲಿಯೇ ಮನಸ್ಸಿಗೆ ಅನಿಸುತ್ತದೆ ಅಥವಾ ಮನಸ್ಸು ಹೇಳುತ್ತಲೇ ಇರುತ್ತದೆ. ಇದನ್ನು ಮಾಡಬಾರದು, ಮಾಡಬಾರದು ಎಂದು ಮತ್ತೆ ಮಾಡಿಬಿಡುತ್ತಿದ್ದೀರಿ. ಕೇಳಬೇಕೆಂದುಕೊಳ್ಳುತ್ತಿಲ್ಲ ಆದರೆ ಹೇಳುತ್ತಿದ್ದರೆ ಏನು ಮಾಡುವುದು ಎನ್ನುತ್ತಿದ್ದೀರಿ. ಆದರೆ ಸತ್ಯವಾದ ಪುರುಷಾರ್ಥ ಎಂದರೆ ವ್ಯರ್ಥಕರ್ಮ ಇರಬಾರದು. ಸೋಮಾರಿಯಾಗಿ ಇದ್ದರೆ ಈ ವಿಷಯವನ್ನಿನ್ನು ಬಿಟ್ಟುಬಿಡಿ, ವಿಶ್ರಾಂತಿಯಿಂದ ನಿದ್ದೆ ಮಾಡಿರಿ, ತ್ರೇತಾಯುಗಕ್ಕೆ ಬನ್ನಿರಿ ಆದರೆ ಪುರುಷಾರ್ಥ ಇದ್ದರೆ ಆ ಸಮಯದಲ್ಲಿಯೇ ಮನಸ್ಸಿಗೆ ಅನಿಸುತ್ತದೆ ಅಥವಾ ಮನಸ್ಸು ಹೇಳುತ್ತಲೇ ಇರುತ್ತದೆ ಇದನ್ನು ಮಾಡಬಾರದು ಎಂದು ಆದರೂ ಮಾಡುತ್ತಿರುತ್ತೀರಿ. ಆಗ ಮಕ್ಕಳ ಈ ಅದ್ಭುತವನ್ನು ನೋಡಿ ಬಾಪ್‌ದಾದಾ ಬೇಡ ಎನ್ನುತ್ತಲೇ ಮಾಡುತ್ತಾ ಇದ್ದೀರಿ, ಮನಸ್ಸು ತಿನ್ನುತ್ತಾ ಇದೆ, ಕೇಳುತ್ತಾ ಇದ್ದೀರಿ ಮತ್ತು ನೋಡುತ್ತಾ ಇದ್ದೀರಿ ಎಂದರೆ ಬಹಳ ಶಕ್ತಿಶಾಲಿ ಆತ್ಮರಲ್ಲವೇ ಎಂದು ಕೇಳುತ್ತಿದ್ದಾರೆ. ಆದ್ದರಿಂದ ವ್ಯರ್ಥ ವಿಷಯದ ಮೇಲಿನ ಗಮನವನ್ನೂ ಪರಿಶೀಲಿಸಿಕೊಳ್ಳಿರಿ. ಪರವಾಗಿಲ್ಲ... ಇದಂತೂ ನಡೆಯುತ್ತಲೇ ಇರುತ್ತದೆ, ಇದಂತೂ ಆಗುತ್ತದೆ, ಇನ್ನು ಎಲ್ಲಿ ಸಂಪೂರ್ಣವಾಗಿ ತಯಾರಾಗಿದ್ದೇವೆ, ಆಗಿಬಿಡುತ್ತೇವೆ...ಈ ನಿರ್ಲಕ್ಷ್ಯ ಇರಬಾರದು. ಮಾಡಬೇಕು ಮತ್ತು ತೀವ್ರ ವೇಗದಿಂದ ಮಾಡಬೇಕು ಎಂದುಕೊಳ್ಳುವುದೇ ಹೋಲಿಯನ್ನು ಆಚರಿಸಿಕೊಳ್ಳುವುದು.

ಬಾಪ್‌ದಾದಾರವರಿಗೆ ಮಕ್ಕಳ ವಿಧವಿಧವಾದ ಆಟಗಳನ್ನು ನೋಡಿ ನಗು ಬರುತ್ತಿದೆ, ದಯೆ ಸಹ ಬರುತ್ತಿದೆ ಮತ್ತು ಬಾಬಾ ಆ ಸಮಯದಲ್ಲಿ ಟಚ್ ಸಹ ಕೊಡುತ್ತಾರೆ. ಅದು ಅನುಭವವೂ ಆಗುತ್ತದೆ ಹೀಗೆ ಮಾಡಬಾರದು ಇದು ಶ್ರೀಮತವಲ್ಲ, ಇದು ತಂದೆಯ ಸಮಾನರಾಗುವುದು ಅಲ್ಲ ಎಂದು ಟಚ್ ಆಗುತ್ತದೆ. ಆದರೆ ಸೋಮಾರಿತನ ಮಲಗಿಸುತ್ತದೆ, ಆದ್ದರಿಂದ ಈಗ ಸ್ವಯಂಗಾಗಿ ಖಜಾನೆಗಳನ್ನು ಹೆಚ್ಚು ಖರ್ಚು ಮಾಡಬೇಡಿರಿ. ಜಮಾ ಮಾಡಿಕೊಳ್ಳಿರಿ. ಆದರೆ ಖರ್ಚು ಮಾಡಬೇಡಿರಿ ಸೇವೆ ಮಾಡಿರಿ ಆದರೆ ವ್ಯರ್ಥವಾಗಿ ಖರ್ಚು ಮಾಡಬೇಡಿರಿ. ಬಹಳ ಜಮಾ ಮಾಡಿಕೊಳ್ಳಬೇಕಲ್ಲವೇ ಡಬಲ್ ವಿದೇಶೀಯರಿಗೆ ಹೀಗೆ ಜಮಾ ಮಾಡಿಕೊಳ್ಳುವ ಅಭ್ಯಾಸ ಇರುವುದಿಲ್ಲ. ಸಂಸ್ಕಾರ ಇರುವುದಿಲ್ಲ. ಲಭಿಸಿದಾಕ್ಷಣ ಖರ್ಚು ಮಾಡಿಬಿಡುತ್ತಾರೆ.

ಕುಡಿಯಬೇಕು, ತಿನ್ನಬೇಕು, ಮಜಾದಿಂದ ಇರಬೇಕು ಎಂದುಕೊಳ್ಳುತ್ತಾರೆ. ಆದರೆ ಈ ಸಂಪಾದನೆಯಲ್ಲಿ ಈ ರೀತಿ ಮಾಡಬೇಡಿರಿ. ಇದರಲ್ಲಿ ಎಲ್ಲದಕ್ಕಿಂತಲೂ ಹೆಚ್ಚು ಜಮಾ ಮಾಡಿಕೊಳ್ಳಿರಿ.

**ನಾಲ್ಕೂ ಕಡೆ ಇರುವ ಪವಿತ್ರಾತ್ಮರಿಗೆ, ಸದಾ ಶ್ರೇಷ್ಠ ಸ್ಥಿತಿಯಲ್ಲಿ ಸ್ಥಿತರಾಗುವ ಶ್ರೇಷ್ಠ ಆತ್ಮರಿಗೆ, ಸದಾ ಸರ್ವ ಖಜಾನೆಗಳಿಂದ ಸಂಪನ್ನವಾಗಿರುವ ಧನವಂತ ಆತ್ಮರಿಗೆ, ಸದಾ ಪ್ರತಿ ಹೆಜ್ಜೆಯಲ್ಲಿ ಪದಮಾಪದಮ್ ಜಮಾ ಮಾಡಿಕೊಳ್ಳುವವರಿಗೆ, ತಂದೆಯ ಸಮಾನವಾಗುವ ಶ್ರೇಷ್ಠ ಆತ್ಮರಿಗೆ, ಸದಾ ದಯಾ ಹೃದಯ, ಕ್ಷಮಾ ಸಾಗರನ ಮಕ್ಕಳು ಮಾಸ್ಟರ್ ಕ್ಷಮಾ ಸಾಗರರಾಗಿ ಕ್ಷಮಿಸುವ ಆತ್ಮರಿಗೆ, ವಿಶ್ವದಲ್ಲಿ ದುಃಖಿ ಆತ್ಮರಿಗೆ ಶಕ್ತಿಯಿಂದ ಸುಖ, ಶಾಂತಿಯ ಸಹಾಯವನ್ನು ಕೊಡುವ ಆತ್ಮರಿಗೆ, ಪ್ರತಿ ಸಮಯ ಸ್ವಯಂನ ಜಮಾ ಖಾತೆಯಿಂದ ಸಂಪನ್ನವಾಗಿರುವ ಪುರುಷಾರ್ಥಿ ಆತ್ಮರಿಗೆ ಬಾಪ್‌ದಾದಾರವರ ಪ್ರಿಯ ಸ್ಮೃತಿಗಳು ಮತ್ತು ನಮಸ್ತೆ.**

ರಿವೈಸ್ ಕೋರ್ಸ್ 13-03-1998.

***ಹೋಲಿ ಶಬ್ದದ ಅರ್ಥ ಸ್ವರೂಪದಲ್ಲಿ ಸ್ಥಿತರಾಗುವುದು ಅರ್ಥಾತ್ ತಂದೆಯ ಸಮಾನರಾಗುವುದು***

ಹೋಲಿ ಎಂಬ ಒಂದು ಶಬ್ದವನ್ನು ನೆನಪಿಟ್ಟುಕೊಂಡರೂ ಸಾಕು. ಹೋಲಿ ಎಂದರೆ ಆದದ್ದೇನು ಆಗಿ ಹೋಯಿತು, ಮತ್ತು ಹೋಲಿ ಎಂದರೆ ತಂದೆಯವರಾಗಿ ಬಿಟ್ಟಿದ್ದೇವೆ, ಹೋಲಿ ಎಂದರೆ ಪವಿತ್ರ ಆತ್ಮ ಆಗಿದ್ದೀರಿ, ಹೀಗೆ ಈ ಹೋಲಿ ಎಂಬ ಒಂದೇ ಮಾತನ್ನು ಸ್ಮೃತಿಯಲ್ಲಿಟ್ಟುಕೊಳ್ಳಿರಿ. ಆ ಮಾತನ್ನು ಮೂರು ಅರ್ಥಗಳಿಂದ ಉಪಯೋಗಿಸಿರಿ. ಹೌದು ಹುಲಿಯೆಂದರೆ ಆದದ್ದೇನು ಆಗಿ ಹೋಯಿತು ಎಂದು ವರ್ಣಿಸುವುದು, ಯೋಚಿಸುತ್ತಾ ಇರುವುದಲ್ಲ. ಅರ್ಥ ಸ್ವರೂಪದಲ್ಲಿ ಸ್ಥಿತರಾಗಿರಿ. ಯೋಚಿಸಿದಿರಿ ಮತ್ತು ಆಗಿಬಿಟ್ಟಿರಿ ಅಷ್ಟೇ ಆಗಲಿ. ಯೋಚಿಸುತ್ತಾ ಯೋಚಿಸುವುದರಲ್ಲಿಯೇ ಇರುವುದಲ್ಲ. ಯೋಚಿಸಿದ ಹಾಗೆಯೇ ತಯಾರಾಗಿರಿ. ಎಂದು ಹೇಳುತ್ತಾ ಶಿವಪರಮಾತ್ಮ ಹೇಳಿರುವ ಮಹಾ ವಾಕ್ಯಗಳಿಂದ ಆತ್ಮಿಕ ಸ್ಥಿತಿಯಲ್ಲಿದ್ದು ಮನನ ಚಿಂತನೆ ಮಾಡಬೇಕಾಗಿರುವ ಸಂಕಲ್ಪಗಳು.

**ಆತ್ಮಿಕ ಸ್ಥಿತಿ/ಯೋಗ ಸ್ಥಿತಿ.**

ನಾನು ಆತ್ಮ ಆನಂದ ಸ್ವರೂಪ, ಶಿವ ಪರಮಾತ್ಮ ನನ್ನ ತಂದೆ.

1. ನಾನು ಹೋಲಿಯಸ್ಟ್ (ಪವಿತ್ರವಾದ), ಹೈಯೆಸ್ಟ್ (ಶ್ರೇಷ್ಠವಾದ) ಮತ್ತು ರಿಚೆಸ್ಟ್ (ಧನವಂತ) ಆತ್ಮನಾಗಿದ್ದೇನೆ.

2. ನಾನು ಮನಸಾ, ವಾಚಾ, ಕರ್ಮಣಾ ಮೂರರ ಪವಿತ್ರತೆಯಿಂದ ಭವಿಷ್ಯವನ್ನು ಅನೇಕ ಜನ್ಮಗಳವರೆಗೆ ತನು, ಮನ, ಧನ, ಸಂಬಂಧ, ಸಂಪರ್ಕ ಮತ್ತು ಜೊತೆ ಜೊತೆಯಲಿ ಆತ್ಮ ಶರೀರವನ್ನು ಸಹ ಪವಿತ್ರವಾಗಿಸಿರುವ ಪವಿತ್ರ ಸ್ವರೂಪ.

3. ನಾನು ಸ್ವಪ್ನ ಮಾತ್ರದ ಅಪವಿತ್ರತೆಯನ್ನೂ ಸಮಾಪ್ತಿ ಮಾಡಿರುವ ಸಂಪೂರ್ಣ ಪವಿತ್ರ ಸ್ವರೂಪ.

4. ನಾನು ಈಗ ಸ್ವರಾಜ್ಯಾಧಿಕಾರಿ ಮತ್ತು ಭವಿಷ್ಯದಲ್ಲಿ ರಾಜರಿಗೆ ರಾಜನು.

5. ನಾನು ಪದಮಾಪದಮ ಪತಿಯಾಗಿದ್ದೇನೆ.(ಕೋಟಾನುಕೋಟಿಗೆ ಅಧಿಪತಿ)

6. ನಾನು ಕೆಂಡ ಸುಡಲಾಗದ, ಕಳ್ಳರು ಕಳ್ಳತನ ಮಾಡಲಾಗದ, ರಾಜರು (ಟ್ಯಾಕ್ಸ್) ಕೂಡ ತಿನ್ನಲಾಗದ ಖಜಾನೆಯನ್ನು ಈ ಸಂಗಮ ಯುಗದಲ್ಲಿ ಪಡೆದಿದ್ದೇನೆ ಎಂಬ ಸ್ವಮಾನದಲ್ಲಿ ಇದ್ದೇನೆ.

7. ನಾನು ಭಿಕ್ಷಕನಿಂದ ರಾಜನಾಗುತ್ತಿದ್ದೇನೆ. (ಬಿಕ್ಷುಕ: ಸರ್ವಸ್ವ ತ್ಯಾಗಿ, ರಾಜ: ಸರ್ವಪ್ರಾಪ್ತಿ ಸ್ವರೂಪ)

8. ನಾನು ತನು, ಮನ, ಧನ, ಸಂಬಂಧಗಳಲ್ಲಿ ನನ್ನದು ಎಂಬ ಒಂದು ಮಾತನ್ನು ನಿನ್ನದು ಎಂಬುದರಲ್ಲಿ ಪರಿವರ್ತನೆ ಮಾಡಿ ತ್ಯಾಗದಿಂದ ಭಾಗ್ಯಕ್ಕೆ ಅಧಿಕಾರಿಯಾಗಿದ್ದೇನೆ.

9. ನಾನು 100 ಹಿಮಾಲಯ ಪರ್ವತಗಳಿಗಿಂತ ದೊಡ್ಡ ಸಮಸ್ಯೆ ಬಂದರೂ ನನ್ನದು ಎಂಬುದನ್ನು ನಿನ್ನದು ಎಂದು ಒಪ್ಪಿ ನಡೆಯುವುದರಿಂದ, ಪರ್ವತವನ್ನು ಹತ್ತಿಯಂತೆ ಅನುಭವ ಮಾಡಿಕೊಂಡಿದ್ದೇನೆ.

10. ನಿನ್ನದು ಆದ್ದರಿಂದ ನೀನೇ ನೋಡಿಕೊಳ್ಳಬೇಕು, ನಾನು ನಿಮ್ಮಿತ್ತನು ಎಂದು ಭಾರವನ್ನೆಲ್ಲ ತಂದೆಗೆ ಕೊಟ್ಟು ಹಗುರವಾಗಿ ಅತೀತ ಮತ್ತು ತಂದೆಗೆ ಪ್ರಿಯವಾಗಿ, ವಿಶ್ವಕ್ಕೆ ಪ್ರಿಯವಾಗಿ ಇದ್ದೇನೆ.

11. ನಾನು ನನ್ನ ತಂದೆ ಎಂಬ ಒಂದರಲ್ಲಿ ಅನೇಕ ವಿಧವಾದ ನನ್ನದು ಎಂಬುದನ್ನು ಸಮಾವೇಶಗೊಳಿಸಿ ಸಮಾಪ್ತಿ ಮಾಡಿದ್ದೇನೆ.

12. ನಾನು ತಂದೆಯವನಾಗಿ (ಬಾಪ್ ಕೀ ಹೊಲಿ), ಪರಮಾತ್ಮನ ಪರಿವಾರದವನಾಗಿ, ಅಶುದ್ಧವನ್ನು, ಬಲಹೀನತೆಯನ್ನು, ಕೆಟ್ಟದ್ದನ್ನು ಸುಟ್ಟು ಹೋಲಿಯನ್ನು ಆಚರಿಸಿಕೊಂಡಿದ್ದೇನೆ.

13. ನಾನು ತಂದೆಯ ಸಮಾನವಾಗಿ ಅಶರೀರಿ ಸ್ಥಿತಿ ಅಥವಾ ಅವ್ಯಕ್ತ ಫರಿಶ್ತಾ ಸ್ಥಿತಿಯನ್ನು ಅನುಭವ ಮಾಡುವ ಪರಮಾತ್ಮನ ರಂಗಿನಲ್ಲಿ ರಂಗರಿಸಲ್ಪಟ್ಟಿದ್ದೇನೆ.

14. ನನ್ನ ಮನಸ್ಸನ್ನು ಯಾವ ರೀತಿಯಾಗಿ ಯಾವ ಸ್ಥಿತಿಯಲ್ಲಿ ಸ್ಥಿತ ಮಾಡಬೇಕೆಂದುಕೊಂಡರೆ ಅಲ್ಲಿ ಮತ್ತು ಆ ರೀತಿಯಾಗಿ ಕ್ಷಣದಲ್ಲಿ ಸ್ಥಿತ ಮಾಡುತ್ತಿದ್ದೇನೆ ಮತ್ತು ಪರಿಸ್ಥಿತಿಯಲ್ಲಿ, ಗೊಂದಲದಲ್ಲಿಯೂ ಅಚಲವಾಗಿರುವ ನಿಯಂತ್ರಣಾ ಶಕ್ತಿ ಸ್ವರೂಪವಾಗಿದ್ದೇನೆ.

15. ನಾನು ಹೋಲಿ ಎಂದರೆ ಆದದ್ದೇನೋ ಆಗಿ ಹೋಯಿತು, ತಂದೆಯವನಾಗಿದ್ದೇನೆ ಮತ್ತು ಪವಿತ್ರ ಆತ್ಮನಾಗಿದ್ದೇನೆ ಎಂಬ ಅರ್ಥ ಸ್ವರೂಪದಲ್ಲಿ ಸ್ಥಿತವಾಗಿದ್ದೇನೆ.

16. ನಾನು ಮಾನಸಿಕ ದುಃಖ, ಅಶಾಂತಿಗಳಿಗೆ, ಮಾನಸಿಕ ಗೊಂದಲದಲ್ಲಿರುವ ಆತ್ಮರಿಗೆ, ಭಕ್ತಾತ್ಮರಿಗೆ ಮನಸಾ ಸೇವೆಯಿಂದ, ವೃತ್ತಿಯಿಂದ ನಾಲ್ಕೂ ಕಡೆ ಸುಖದ ಸಹಾಯವನ್ನು ಅನುಭವ ಮಾಡಿಸುವ ಪೂಜ್ಯ ದೇವತಾ ಸ್ವರೂಪ.

17. ನಾನು ಇತರರಿಗೆ ಶಕ್ತಿ, ಗುಣ, ಜ್ಞಾನ ಖಜಾನೆಯನ್ನು ಕೊಟ್ಟು ಜಮಾ ಖಾತೆಯನ್ನು ಹೆಚ್ಚಿಸಿಕೊಂಡಿದ್ದೇನೆ.(ಸ್ವಯಂನ ಸ್ವಭಾವ ಸಂಸ್ಕಾರಗಳಿಗೆ ಅಥವಾ ಮಾಯೆಯಿಂದ ಬರುವ ಸಮಸ್ಯೆಗಳಲ್ಲಿ ಶಕ್ತಿಯನ್ನು ಉಪಯೋಗಿಸಿದರೆ ಜಮಾ ಖಾತೆ ಖಾಲಿಯಾಗುತ್ತದೆ)

18. ನಾನು ಜಮಾ ಖಾತೆಯೊಂದಿಗೆ ಖರ್ಚಿನ ಖಾತೆಯನ್ನು ವಿಶಾಲ ಬುದ್ಧಿಯಿಂದ ಪರಿಶೀಲಿಸಿಕೊಂಡು ಜಮಾ ಖಾತೆಯನ್ನು ಹೆಚ್ಚಿಸಿಕೊಂಡಿದ್ದೇನೆ.

19. ನನ್ನ ಪ್ರತಿಯೊಂದು ಹೆಜ್ಜೆ ಬ್ರಹ್ಮಾ ತಂದೆಯ ಸಮಾನವಾಗಿ ಇದೆಯೇ ಎಂದು ಪರಿಶೀಲಿಸಿಕೊಂಡು ಜಮಖಾತೆಯನ್ನು ಹೆಚ್ಚಿಸಿಕೊಂಡಿದ್ದೇನೆ.

20. ನಾನು ತಂದೆಯನ್ನು ಜೊತೆಯಲ್ಲಿಟ್ಟುಕೊಂಡು ಕರ್ಮ ಮಾಡಿ ಪ್ರತ್ಯಕ್ಷ ರೂಪದಲ್ಲಿ ಖುಷಿ, ಶಕ್ತಿ ಮತ್ತು ಸಫಲತೆಯನ್ನು ಅನುಭವ ಮಾಡಿ ಡಬಲ್ ಲೈಟ್ ಆಗಿ ಇದ್ದೇನೆ.

21. ನಾನು ವ್ಯರ್ಥ ಸಂಕಲ್ಪಗಳನ್ನು, ವ್ಯರ್ಥಕರ್ಮ, ವ್ಯರ್ಥ ಮಾತನ್ನು, ವ್ಯರ್ಥ ಸಂಬಂಧ ಸಂಪರ್ಕಗಳ ವಿಷಯದಲ್ಲಿಯೂ ಗಮನದಿಂದ ಪರಿಶೀಲಿಸಿ ಪರಿವರ್ತನೆ ಮಾಡುವ ಪುರುಷಾರ್ಥಿ ಆಗಿದ್ದೇನೆ.